ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ **74/2020**

ದಿನಾಂಕ **08.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂ-1

ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಎನ್.ಎನ್.ಆರ್ ವಕೀಲರಿಂದಃ

ಇದೇ ನ್ಯಾಯಾಲಯ ಮುಂದೆ ನಾನು ಓ.ಎಸ್ ಸಂಖ್ಯೆ:13/2019 ನ್ನು ಹೂಡಿದ್ದೇನು ಎಂದರೆ ಸರಿ. ಸದರಿ ದಾವೆಯನ್ನು ನಾನು ವಿಭಾಗಕ್ಕೆ ಸಲ್ಲಿಸಿದ್ದೆ. ಸದರಿ ದಾವೆಯನ್ನು ನಾನು ರಾಜಿ ಮಾಡಿಕೊಂಡಿದ್ದೇನೆ ಎಂದು ಮೆಮೋ ಸಲ್ಲಿಸುವ ಮೂಲಕ ವಾಪಸ್ಸು ಪಡೆದಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಓ.ಎಸ್ ಸಂಖ್ಯೆ:13/2019 ರ ಆದೇಶ ಪುಟ, ವಾದಪತ್ರ ಮತ್ತು ದಿ04.04.2019 ರ ಮೆಮೋ ವನ್ನು ತೋರಿಸಲಾಯಿತು. ಸಾಕ್ಷಿ ಅವುಗಳನ್ನು ನೋಡಿ ಒಪ್ಪಿರುತ್ತಾರೆ. ಅವುಗಳನ್ನು ನಿಡಿ-1 ರಿಂದ 3 ಎಂದು ಗುರುತಿಸಲಾಯಿತು.

2. ದಿ.16.01.2018 ರಂದು ನನ್ನ ಹಕ್ಕನ್ನು ಬಿಡುಗಡೆ ಮಾಡಿ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಸಹಿ ಮಾಡಿರುತ್ತೇನೆ ಆದರೆ ನನ್ನ ಹಕ್ಕು ಖುಲಾಸೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನರೇಶ್ ರವರಿಗೆ ಜಮೀನು ಮಾರಾಟ ಮಾಡಿದಾಗ ನಾನು ಹಕ್ಕು ಖುಲಾಸೆ ಬರೆದು ಕೊಟ್ಟಾಗಿಯೂ ಸಹ ತಕಾರಾರು ಸಲ್ಲಿಸಿದ್ದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿ.05.04.2019 ರಂದು ನರೇಶ್ ಎನ್ನುವವರು ನನಗೆ ಚೆಕ್ ಮೂಲಕ ರೂ.10,000,00/- ಹಣ ಕೊಟ್ಟಿದ್ದರು ಎಂದರೆ ಸರಿ. ಸದರಿ ಹಣ ಪಡೆದ ಬಗ್ಗೆ ನಾನು ಹಣ ಸಂದಾಯ ರಶೀದಿ ಸಹ ಬರೆದುಕೊಟ್ಟಿದ್ದೇನೆ ಎಂದರೆ ಸರಿ. ಸಾಕ್ಷಿ ಸದರಿ ಹಣ ಸಂದಾಯ ರಶೀದಿಯನ್ನು ನೋಡಿ ತಮ್ಮ ಸಹಿ ಗುರುತಿಸಿರುತ್ತಾರೆ. ಅದನ್ನು ನಿಡಿ-4 ಎಂದು, ಸಾಕ್ಷಿ ಸಹಿಯನ್ನು ನಿಡಿ-4(ಎ) ಎಂದು ಗುರುತಿಸಲಾಯಿತು.

3. ನನ್ನ ಒಟ್ಟು ಕುಟುಂಬದ ಆಸ್ತಿಗಳಲ್ಲಿ ನನಗೆ ಹಕ್ಕು ಇಲ್ಲ ಎಂದು ಈ ಹಿಂದೆ ಸಲ್ಲಿಸಿದ ದಾವೆಯನ್ನು ರಾಜಿ ಮಾಡಿಕೊಂಡು ನಂತರ ನಾನೇ ಮತ್ತೊಂದು ದಾವೆ ಸಲ್ಲಿಸಿದ್ದೇನೆ ಎಂದರೆ ಮನೆಗಳನ್ನು ಬಿಟ್ಟು ಮಾರಾಟ ಮಾಡಿದ ಜಮೀನುಗಳಿಗೆ ಮಾತ್ರ ದಾವೆ ಸಲ್ಲಿಸಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಮಾರಿದ 5 ಎಕರೆ ಜಾಗಕ್ಕೆ ಮಾತ್ರ ದಾವೆ ಸಲ್ಲಿಸಿದ್ದೀರಾ ಎಂದರೆ ಸರಿ

<u>ಪಾಟೀ ಸವಾಲುಃ ಈ ಹಂತದಲ್ಲಿ ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.</u>

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ